# ವಿಶ್ವನಂದಿನಿ ಲೇಖನಮಾಲೆ – 73

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಮೂವತ್ತೆರಡನೆಯ ಪದ್ಯ

ಎಲ್ಲರೂ ಬಾಲ್ಯದಲ್ಲಿ ಪರಾಕ್ರಮಿಗಳಾಗದೇ ಯೌವನದಲ್ಲಿ ದೇಹವನ್ನು ಹುರಿಗಟ್ಟಿಸಿ ಪರಾಕ್ರಮಿಗಳಾಗುತ್ತಾರೆ. ಆ ರೀತಿಯಲ್ಲಿ ನನ್ನದು ಸಂಪಾದಿಸಿಕೊಂಡ ಸಾಮರ್ಥ್ಯವಲ್ಲ, ಸ್ವಾಭಾವಿಕವಾದದ್ದು ಎಂದು ಸಜ್ಜನರಿಗೆ ತೋರಲೋಸುಗ ಶಿಶುವಾಗಿದ್ದಾಗ ರಾಕ್ಷಸರನ್ನು ಕೊಂದು, ಯೌವನದಲ್ಲಿ ಪಾಂಡವರ ಸಾರಥಿಯಾಗಿ ಆಯುಧಗಳನೆಲ್ಲ ತೊರೆದು ಭಗವಂತ ಭೂಭಾರವನ್ನು ಹಿಂಗಿಸಿದ ಎಂದು ಪರಮಾತ್ಮನ ಸಾಮರ್ಥ್ಯ ಜನ್ಯವಾದುದಲ್ಲ, ಸ್ವಾಭಾವಿಕವಾದದ್ದು ಎಂಬ ಚಿಂತನೆಯನ್ನು ಮುಂದಿನ ಶ್ಲೋಕದಲ್ಲಿ ಮಾಡುತ್ತಾರೆ -

**ಶಿಶುತನದ ಸಾಮರ್ಥ್ಯದಲಿ ಕೆಲ-**
**ರಸುರರರನು ಸಂಹರಿಸಿ ಚಕ್ರವ**
**ಬಿಸುಟು ಯೌವನ ಕಾಲದಲಿಯಾ ಪಾಂಡುಸುತರಿಂದ ।**

**ವಸುಮತಿಯ ಭಾರವನಿಳುಹಿ ಸಾ-**
**ಹಸದಿ ಮೆರೆದವನಾಗಿ ನೀ ಮೆ-**
**ಚ್ಚಿಸಿದೆ ತ್ರಿಜಗವನೆಲ್ಲ ರಕ್ಷಿಸು ನಮ್ಮನನವರತ ‖ ೩೨ ‖**

ಶಿಶುತನದ ಸಾಮರ್ಥ್ಯದಲಿ ಕೆಲರಸುರರನು ಸಂಹರಿಸಿ - ಹುಟ್ಟಿದೇಳು ದಿನಕ್ಕೆ ಪೂತನಿಯನ್ನು ಕೊಂದು, ನಾಲ್ಕು ತಿಂಗಳಿಗೆ ಶಕಟಾಸುರನನ್ನು ಕೊಂದು, ಅಂಬೆಗಾಲಿಡಲಿಕ್ಕೂ ಬಾರದ ವಯಸ್ಸಿನಲ್ಲಿ ತೃಣಾವರ್ತನನ್ನು ಕೊಂದು, ಅಂಬೆಗಾಲಿಡುವಾಗ ಅರ್ಜುನವೃಕ್ಷಗಳಲ್ಲಿದ್ದ ಧುನಿ ಮತ್ತು ಚಮು ಎಂಬ ಇಬ್ಬರು ರಾಕ್ಷಸರನ್ನು ಕೊಂದು ಆ ಬಳಿಕ, ವತ್ಸ, ಬಕ, ಉಗ್ರ, ವೃಷ, ಖರ, ಶಂಖಚೂಡ, ಅರಿಷ್ಟ, ಕೇಶಿ, ವ್ಯೋಮ, ಚಾಣೂರ, ಮುಷ್ಟಿಕ, ಕಂಸಭೃತ್ಯರು, ಕಂಸ ಈ ಎಲ್ಲ ರಾಕ್ಷಸರನ್ನು ಹದಿನಾಲ್ಕನೆಯ ವಯಸ್ಸಿನಲ್ಲಿ ಕೊಂದು, ಜರಾಸಂಧ ಕರೆದು ಕೊಂಡು ಬಂದ ಲಕ್ಷ ಲಕ್ಷ ಸಂಖ್ಯೆಯ ಸೈನಿಕರೂಪದ ಅಸುರರನ್ನು ಸಂಹರಿಸಿ,

ಬಳಿಕ ಯೌವನ ಕಾಲದಲ್ಲಿ ಮಧ್ಯವಯಸ್ಸಿನಲ್ಲಿ ಚಕ್ರವನು ಬಿಸುಟು ಆಯುಧವನ್ನು ಹಿಡಿಯದೇ, ಆ

ಪಾಂಡುಸುತರಿಂದ ಮಹಾಪರಾಕ್ರಮಿಗಳಾದ ಪಾಂಡವರಿಂದ ವಸುಮತಿಯ ಭಾರವನಿಳುಹಿ ಹದಿನೆಂಟು ಅಕ್ಷೌಹಿಣಿಯ ಸಂಖ್ಯೆಯಲ್ಲಿ ನೆರೆದಿದ್ದ ಭೂಭಾರವನ್ನು ಇಳಿಸಿ 'ಸಾಹಸದಿ ಮೆರೆದವನಾಗಿ' ಅಪ್ರತಿಮ ವೀರ ಎಂದು ರಾಜಿಸಿದವನಾಗಿ ನೀನು ತ್ರಿಜಗವನೆಲ್ಲ ಮೆಚ್ಚಿಸಿದೆ ಸಮಸ್ತ ಸಜ್ಜನರಿಗೆ ಆನಂದವನ್ನಿತ್ತೆ.

ಓ ಚೆನ್ನಿಗರಾಯ ನಮ್ಮನ್ನು ಶಿಶುರೂಪದಿಂದಲೂ ರಕ್ಷಿಸು ಯೌವನರೂಪದಿಂದಲೂ ರಕ್ಷಿಸು ಒಟ್ಟಾರೆ ಅನವರತ ನಿರಂತರ ನಮ್ಮನ್ನು ರಕ್ಷಿಸು.

'ಚಕ್ರವ ಬಿಸುಟು' ಎಂದರೆ ಆಯುಧಗಳನ್ನು ಪಕ್ಕಕ್ಕಿಟ್ಟು, ಅವನ್ನು ಹಿಡಿಯದೇ ಎಂದಷ್ಟೇ ಅರ್ಥ ಮಾಡಿಕೊಳ್ಳಬೇಕು. ಹೊರತು ಅವನ್ನು ಬಿಸಾಡುವದು, ಸರ್ವಾತ್ಮನಾ ತ್ಯಜಿಸುವದು ಎಂದು ಅರ್ಥ ಮಾಡಿಕೊಳ್ಳಬಾರದು.
ಸೃಷ್ಟಿಕರ್ತೃತ್ವಾದಿಗಳಂತೆ ಚಕ್ರಧಾರಿತ್ವಾದಿಗಳು ಪರಮಾತ್ಮನ ಲಕ್ಷಣವಾದ ಗುಣಗಳು ॥ ೩೨ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ